ಶ್ರೀ ಎಸ್. ನಿಜಲಿಂಗಪ್ಪ.—ಕನ್‌ಸ್ಯೂಮರ್ ಸೊಸೈಟಿಯೆಂದು ಮಾಡಬೇಕೆಂದು ಇದ್ದೇವೆ, ಪ್ರಯತ್ನ ನಡೆಯುತ್ತಿದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಒಂದು ಲಕ್ಷ ಮತ್ತು 50 ಸಾವಿರ ಜನ ಸಂಖ್ಯೆ ಇರತಕ್ಕಂಥ ಊರುಗಳಲ್ಲಿ ಈ ಸ್ಟೋರ್‌ಗಳನ್ನು ಮಾಡಬೇಕೆಂದಿದ್ದೇವೆ, ಈ ರೀತಿ ಮಾಡುವು ದರಿಂದ ಹೆಚ್ಚಿನ ಸೌಕರ್ಯ ದೊರೆತೀತು ಎಂಬ ನಿರೀಕ್ಷೆ ಇದೆ.

ಶ್ರೀ ಬಿ. ಬೈರಪ್ಪಾಜಿ.—ತಾವು 3ನೇ ಮೇ 1965ರಲ್ಲಿ ಪೇ-ಕಮಿಟಿ ನೇಮಕ ಮಾಡಿದ್ದೇನೆಂದು ಹೇಳಿದಿರಿ. ಅಲ್ಲಿಂದ ಇಲ್ಲಿಯತನಕ ಆ ಕಮಿಟಿ ಏನು ಕಾರ್ಯ ನಡೆಸಿದೆ ಇನ್ನು ಎಷ್ಟು ದಿವಸ ಅಥವಾ ಎಷ್ಟು ತಿಂಗಳುಗಳಲ್ಲಿ ಆ ಕಮಿಟಿಯವರು ತಮ್ಮ ತೀರ್ಮಾನವನ್ನು ಸರ್ಕಾರಕ್ಕೆ ನಲ್ಲಿಸುತ್ತಾರೆ?

ಶ್ರೀ ಎಸ್. ನಿಜಲಿಂಗಪ್ಪ.—ಬಹುಶಃ ಅದಷ್ಟು ಜಾಗ್ರತೆ ಮಾಡುತ್ತಾರೆ.

Sri K. LAKKAPPA.—The Hon'ble Chief Minister said that this Government has asked for Central aid to meet the demands of the N.G.O's. I want to know what exactly is the Central aid that this Government has asked from the Centre?

ಶ್ರೀ ಎಸ್. ನಿಜಲಿಂಗಪ್ಪ.—ನಾನು ಹೇಳಿದ್ದು ಕೇಂದ್ರ ಸರ್ಕಾರದವರು ತಮ್ಮ ನೌಕರರಿಗೆ ಇನ್ನುಮುಂದೆ ಎಷ್ಟು ಜಾಸ್ತಿಮಾಡುತ್ತಾರೋ ಅಷ್ಟನ್ನು ನಮ್ಮ ನೌಕರರಿಗೂ ಮಾಡುತ್ತೇವೆ. ಆ ಜಾಸ್ತಿಯಾದ ಹಣವನ್ನು ಕೇಂದ್ರದವರು ಕೂಡಬೇಕೆಂದು ಕೇಳಿದ್ದೇವೆ.

ಶ್ರೀ ಎಸ್. ಗೋಪಾಲಗೌಡ.—ಕೇಂದ್ರ ಸರ್ಕಾರದ ನೌಕರರಿಗೂ ಮತ್ತು ರಾಜ್ಯ ಸರ್ಕಾರದ ನೌಕರರಿಗೂ ಮೂಲ ವೇತನ ಹಾಗೂ ತುಟ್ಟಿಭತ್ಯಗಳಲ್ಲಿ ಅಪಾರ ವ್ಯತ್ಯಾಸವಿದೆ. ಅಲ್ಲದೆ ಈಗ ಒಂದೇ ಸಮನೆ ಅವಶ್ಯಕ ವಸ್ತುಗಳ ಬೆಲೆ ಏರಿರುವುದರಿಂದ ನೀವು ಕೊಟ್ಟಿರತಕ್ಕಂಥ ತುಟ್ಟಿಭತ್ಯವು ಈ ಏರುಪೇಕೆಯನ್ನು ಸರಿಗಟ್ಟುವುದಕ್ಕೆ ಸಾಧ್ಯವಾಗಿಲ್ಲ. ಅದರಿಂದ ಸರ್ಕಾರದವರು ಇನ್ಟೆರಿಮ್ ರಿಲೀಫ್ ಕೊಡುವುದಕ್ಕೆ ಏನಾದರೂ ಯೋಚನೆ ಮಾಡಿದ್ದಾರೆಯೇ;

ಶ್ರೀ ಎಸ್. ನಿಜಲಿಂಗಪ್ಪ.—ಸರ್ಕಾರದವರು ಇನ್ಟೆರಿಮ್ ರಿಲೀಫ್ ಕೊಡುವುದಕ್ಕೆ ಸಾಧ್ಯವಾಗು ವುದಿಲ್ಲ. ಏಕೆಂದರೆ, ನಮ್ಮ ಹಣಕಾಸಿನ ಪರಿಸ್ಥಿತಿ ಬಹಳ ಕಷ್ಟದಲ್ಲಿದೆ. ವೇತನಗಳಲ್ಲಿ ಕೇಂದ್ರ ಸರ್ಕಾರದ ನೌಕರರಿಗೂ ಮತ್ತು ರಾಜ್ಯ ಸರ್ಕಾರದ ನೌಕರರಿಗೂ ವ್ಯತ್ಯಾಸವಿದೆ. ಈ ವ್ಯತ್ಯಾಸ ವನ್ನು ತೆಗೆಯಬೇಕೆಂದು ಮುಖ್ಯ ಮಂತ್ರಿಗಳ ಸಭೆಯಲ್ಲಿ ಸಾಕಷ್ಟು ನಲ ಒತ್ತಾಯ ಮಾಡಿದ್ದೇವೆ. ಮತ್ತು ಈ ತುಟ್ಟಿಭತ್ಯ ಸಾಧಾರಣವಾಗಿ ಈಗ ಮೊನ್ನೆ ಕೇಂದ್ರ ಸರ್ಕಾರದವರು ಏನು ಕೊಟ್ಟರೋ ಅದಕ್ಕೆ ಮುಂಚೆ ಕೇಂದ್ರ ಸರ್ಕಾರದ, ಮಿಲಿಟರಿ ಸರ್ಕಾರದ ಮತ್ತು ಮೈನೂರು ಸರ್ಕಾರದ ನೌಕರರುಗಳಲ್ಲಿ ಅಷ್ಟೊಂದು ವ್ಯತ್ಯಾಸವಿರಲಿಲ್ಲ.

Land Improvement and Debt Redemption Loans.

*Q.—523. Sri H. D. DEVE GOWDA (Holenarasipur).—

Will the Minister for Co-operation and Housing be pleased to state:—

(*a*) the number of applications received for land improvement and debt redemption loans by the Mysore State Land Development Bank in the year 1963-64, 1964-65. 1965-66 from Holenarasipur Primary Land Development Society (Primary Land Mortgage Society);

(*b*) the number of them that were sanctioned and for how many of them the amount was disbursed (yearwise figures may be furnished);

(*c*) what is the amount required to make payments to the sanctioned applications and also to unsanctioned and pending applications both under land improvement and debt redemption loans;

(*d*) the reason for the delay in this behalf,

(SRI H. D. DEVE GOWDA)

(*e*) whether they would take necessary steps to see that the pending applications under both heads are disposed of early by making payments through the said Bank ?

A.—Sri K. PUTTASWAMY (Minister for Co-operation and Housing)—

(*a*)

Year		*No. of applications under L. I. loan*
1963-64	...	17
1964-65	...	39
1965-66	...	42

Year		*No. of applications under debt redemption loan*
1963-64	...	22
1964-65	...	32
1965-66	...	16

(*b*)

Year		*No. of applications under L. I. loan sanctioned and disbursed.*
1963-64	...	9
1964-65	..	24
1965-66	...	26

Year		*No. of applications under debt redemption sanctioned*
1963-64	...	9
1964-65	...	24
1965-66	...	10

(*c*) Rs. 72,190.

(*d*) delay in sanction and disbursement of loans is due to the non-availability of funds to meet the demand of Primary Banks at a time and due to lack of knowledge in properly building up the loan records at the level of primary banks.

(*e*) Yes.

ಶ್ರೀ ಎಚ್. ಡಿ. ದೇವೇಗೌಡ.—ತಾವು ಕೊಟ್ಟಿರತಕ್ಕ ಅಂಕಿಅಂಶಗಳಲ್ಲಿ 49 ಅರ್ಜಿಗಳು ಪೆಂಡಿಂಗ್ ಉಳಿಯಲು ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಕೆಲವು ಅರ್ಜಿಗಳು ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಕಳುಹಿಸಿದ್ದೆವು. ಅಲ್ಲಿಂದ ಸಾಕಷ್ಟು ಇನ್‌ಫರ್‌ಮೇಷನ್ ಬರದಿದ್ದರಿಂದ ನಿಧಾನವಾಯಿತು. 12 ಕೇಸುಗಳು ಇತ್ತೀಚೆಗೆ ಸ್ಯಾಂಕ್ಷನ್ ಆಗಿವೆ. ಡೆಟ್ ರಿಡಮ್ಷನ್ ಕಾರಣದಿಂದ ಕೆಲವು ಅರ್ಜಿಗಳನ್ನು ಸ್ಯಾಂಕ್ಷನ್ ಮಾಡುವುದಕ್ಕಾಗಿಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—'ಡಿ' ನಲ್ಲಿ ಉತ್ತರವಾಗಿ 'non-availability of funds' ಎಂದು ತಿಳಿಸಿದ್ದಾರೆ. ಕೇಂದ್ರ ಬ್ಯಾಂಕ್‌ನವರು ಹಣವನ್ನು ಅಲೋಕೇಟ್ ಮಾಡುವುದು ಯಾವ ಆಧಾರದಮೇಲೆ ?

ಶ್ರೀ ಕೆ. ಪುಟ್ಟಸ್ವಾಮಿ.—ಅವರು past performance ಗಣನೆಗೆ ತೆಗೆದುಕೊಂಡು ಮಾಡುತ್ತಾರೆ. 1964-65ರಲ್ಲಿ 28.64 ಡಿಫಾಲ್ಟರ್ಸ್ ಇದ್ದರು. 1965-66ರಲ್ಲಿ 68 ಪರ್‌ಸೆಂಟ್ ಡಿಫಾಲ್ಟರ್ಸ್ ಇದ್ದರು. ಬಾವಿ ಯೋಜನೆಯಲ್ಲಿ ಯಾರು ಡಿಫಾಲ್ಟರ್ಸ್ ಆಗಿದ್ದರೂ ಸಹ ಹಣ ಕೊಡುತ್ತೇವೆ. ಬಾಕಿಯುವಕ್ಕೆ ಡಿಫಾಲ್ಟರ್ಸ್ ಆಗಿದ್ದರೆ ಹಣ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು 25 ಪರ್‌ಸೆಂಟ್ ಡಿಫಾಲ್ಟರ್ಸ್ ಇದ್ದರೆ ಹಣ ಕೊಡುವುದಿಲ್ಲವೆಂದು ಹೇಳಿದರು. ಕೆಲವು ಕಡೆ 60 ಪರ್‌ಸೆಂಟ್ ಇದ್ದೂ ಲಕ್ಷಗಟ್ಟಲೆ ಹಣವನ್ನು ಕೊಟ್ಟಿರುವುದು ಗೊತ್ತಿದೆಯೇ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಬರೀ ಅಪಾದನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಬೆಂಗಳೂರು ಕೇಂದ್ರ ಬ್ಯಾಂಕ್‌ಗೆ ಹೋಗಿ ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ.

Mr. SPEAKER.—It is disallowed. This is not the time to request the Minister to go and hold a personal enquiry. If the member wants he may write and elicit the information.

Sri H. D. DEVEGOWDA.—Let him personally know the way in which the administration of this Bank is carried on.

Mr. SPEAKER.—The Chair heartily agrees but it should be done in a proper method. The Question Hour is meant for eliciting information.

Will the Hon. Minister go and inspect the Bank?

ಶ್ರೀ ಕೆ. ಪುಟ್ಟಸ್ವಾಮಿ.—ಈಗಾಗಲೇ ಉತ್ತರ ಹೇಳಿದ್ದೇನೆ. ಬಾವಿ ಯೋಜನೆಗೆ ಅವರು ಎಷ್ಟೇ ಡಿಫಾಲ್ಟರಾಗಿದ್ದರೂ ಸಹ ಸಾಕಷ್ಟು ಹಣ ಕೊಡುತ್ತೇವೆ. ಅಯಾಯಾ ಜಿಲ್ಲೆಗಳಲ್ಲಿ ಬಾವಿ ತೆಗೆಯುವುದಕ್ಕೆ ಏನೇನು ಅನುಕೂಲವಿದೆ, ಅಲ್ಲಿಗೆ ಎಷ್ಟು ಬಾವಿಗಳು ಬೇಕು ಎಂಬುದನ್ನು ಗಣನೆಗೆ ತೆಗೆದುಕೊಂಡು ತಾರ್ಕಿಕಗನುಗುಣವಾಗಿ ಬಾವಿಗಾಗಿ ಮಾತ್ರ 60 ಪರ್‌ಸೆಂಟ್ ಅಥವಾ 80 ಪರ್‌ಸೆಂಟ್ ಡಿಫಾಲ್ಟರಾಗಿರಲಿ ಸಾಲಗಳನ್ನು ಕೊಡುತ್ತಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮೈಸೂರು ರಾಜ್ಯದಲ್ಲಿ ಯಾರ್ಡಿ ಕಮಿಟಿಯವರು ಪ್ರವಾಸ ಮಾಡಿ ಹೊಳೆನರಸೀಪುರವು ಕ್ಷಾಮ ಪೀಡಿತ ಪ್ರದೇಶವೆಂದು ವರದಿ ಮಾಡಿರುವುದು ನಿಜವೇ? ಆದರ ಮೇರೆಗೆ ಬಾಕಿ ನಿಂತಿರುವ ಎಲ್ಲಾ ಅರ್ಜಿಗಳನ್ನು ಮಂಜೂರು ಮಾಡುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ಯಾರ್ಡಿ ಕಮಿಟಿಯವರು ಹೊಳೆನರಸೀಪುರದ ಕೆಲವು ಭಾಗಗಳು ಮಾತ್ರ ಅಭಾವಕ್ಕೆ ಒಳಗಾಗಿದೆಯೆಂದು ಹೇಳಿದ್ದಾರೆ. ತರಿ ಜಮೀನಿರುವ ಭಾಗ ಅಭಾವಕ್ಕೊಳಗಾಗಿಲ್ಲ. ಈಗ ಎಲ್ಲಾ ಅರ್ಜಿಗಳನ್ನೂ ಮಂಜೂರು ಮಾಡುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಅವರವರ ದಕ್ಷತೆಯನ್ನು ಪರಿಶೀಲನೆ ಮಾಡಿ ತೀರ್ಮಾನ ಮಾಡುತ್ತೇವೆ. ಏಪ್ರಿಲ್‌ನಿಂದ ಈವರೆಗೆ 12 ಅರ್ಜಿಗಳಿಗೆ ಸಾಲವನ್ನು ಒದಗಿಸಲಾಗಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಮೈಸೂರು ದೇಶದಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಸ್ಥಾಪನೆ ಮಾಡಿದ್ದು ರೈತರು ಸಾಲ ತೀರಿಸುವುದಕ್ಕೋಸ್ಕರ. ಈಗ ಅದನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಎಂದು ಬದಲಾವಣೆ ಮಾಡಿದ್ದೀರಿ. ಈ ಬ್ಯಾಂಕ್‌ಗೆ ಎರಡು ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಮೊದಲಿನ ರೀತಿಯೇ ಇರುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ಮೂಲ ಉದ್ದೇಶ ರೈತರ ಋಣ ಪರಿಹಾರ ಮಾಡುವುದಕ್ಕೆ ಬ್ಯಾಂಕ್ ಸ್ಥಾಪಿತವಾದುದು. ಆದರೆ ಇತ್ತೀಚೆಗೆ ಎಷ್ಟು ಪರಿಹಾರ ಒದಗಿಸಿದರೂ ಹೊಸ ಹೊಸ ಸಾಲಗಳನ್ನು ಕೇಳುತ್ತಿದ್ದಾರೆ. ಇತ್ತೀಚೆಗೆ ಭೂಮಿಯ ಅಭಿವೃದ್ಧಿಗಾಗಿ ಸಾಲವನ್ನು ಕೊಡುತ್ತಿದ್ದೇವೆ. ಅದರಲ್ಲೆ ಬಾವಿಗಾಗಿ ಹೆಚ್ಚು ಹೆಚ್ಚು ಹಣವನ್ನು ಸಾಲವಾಗಿ ಕೊಡುತ್ತಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ.—ಸೆಂಟ್ರಲ್ ಬ್ಯಾಂಕಿನಿಂದ ಮಂಜೂರಾದ ಹಣ ಪ್ರೈಮರಿ ಲ್ಯಾಂಡ್ ಡವಲಪ್‌ಮೆಂಟ್ ಬ್ಯಾಂಕ್‌ಗೆ ಬರಬೇಕಾದರೆ ಸ್ಟೇಟ್ ಆಫೆಕ್ಸ್ ಬ್ಯಾಂಕ್, ಮತ್ತು ಡಿಸ್ಟ್ರಿಕ್ಟ್ ಸೆಂಟ್ರಲ್ ಬ್ಯಾಂಕ್ ಮೂಲಕ ಬರಬೇಕು. ಇದರಿಂದ ಬಹಳ ನಿಧಾನವಾಗುತ್ತದೆ. ಆದ್ದರಿಂದ ನೇರವಾಗಿ ಸೆಂಟ್ರಲ್ ಬ್ಯಾಂಕ್ ಮೂಲಕ ಬರಬೇಕು. ಇದರಿಂದ ಬಹಳ ನಿಧಾನವಾಗುತ್ತದೆ. ನೇರವಾಗಿ ಸೆಂಟ್ರಲ್ ಬ್ಯಾಂಕ್‌ನಿಂದ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗೆ ಹಣ ಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಪುಟ್ಟಸ್ವಾಮಿ.—ವಿಳಂಬವಾಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಶೀಘ್ರವಾಗಿ ಹಣ ತಲುಪುತ್ತಿದೆ. ಅಲ್ಲದೆ ಇದರ ಬಗ್ಗೆ ಯಾವ ದೂರೂ ಬಂದಿಲ್ಲ.

Sri R. S. HEGDE.—In answer to (d), the reason given is due to lack of knowledge in properly building up the loan records at the level of primary banks. Is it not a fact that Land Valuation Inspectors are attached to each Bank, and if so, are they so inexperienced as not to build up the records in time?

ಶ್ರೀ ಕೆ. ಪುಟ್ಟಸ್ವಾಮಿ.—ಲ್ಯಾಂಡ್ ವ್ಯಾಲ್ಯುಯೇಷನ್ ಆಫೀಸರ್ ಲ್ಯಾಂಡನ್ನು ವ್ಯಾಲ್ಯು ಮಾಡುತ್ತಾರೆ. ಆದಕ್ಕೆ ಬೇಕಾದಂಥ ದಾಖಲಾತಿಗಳನ್ನು ಒದಗಿಸುವುದನ್ನು ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ಮಾಡಬೇಕು. ಅಲ್ಲಿಗೆ ಬಂದಂಥ ದರಖಾಸ್ತುದಾರರಿಗೆ ಆ ವಿಚಾರ ತಿಳಿಸಿ ರಿಕಾರ್ಡುಗಳನ್ನು ಒದಗಿಸಿಕೊಡುವ ಹಾಗೆ ಮಾಡಿಕೊಂಡರೆ ಸಾಧ್ಯ, ಇಲ್ಲದಿದ್ದರೆ ತೊಂದರೆ ಯಾಗುತ್ತದೆ. ಈಗ ಸಾಮಾನ್ಯವಾಗಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಅನೇಕ ರಿಕಾರ್ಡು ಗಳನ್ನು ವಾಪಸ್ಸು ಕಳುಹಿಸಿಕೊಡುತ್ತಾರೆ. ಬೇಕಾದಷ್ಟು ಅಂಕ ಅಂಶಗಳನ್ನು ಒದಗಿಸಬೇಕೆಂದು ಆ ರೀತಿಯಾಗಿ ಕಳುಹಿಸುತ್ತಾರೆ. ಆ ಕಾರಣದಿಂದ ವಿಳಂಬವಾಗುವುದೂ ಉಂಟು.

ಶ್ರೀ ಬಿ. ಬೈರಪ್ಪಾಜಿ.—1963—64ನೇ ಇಸವಿಯಿಂದ ಲ್ಯಾಂಡ್ ಇಂಪ್ರೂವ್‌ಮೆಂಟಿಗಾಗಿ ಕೊಟ್ಟಿರತಕ್ಕ ದರಖಾಸ್ತುಗಳು ಇದೊಂದು ಸೊಸೈಟಿಯಲ್ಲಿಯೇ ಅಲ್ಲ. ನೂರಾರು ಸೊಸೈಟಿಗಳಲ್ಲಿ ಆ ರೀತಿ ಉಳಿದುಕೊಂಡಿದೆ. ಅದು ಕೇಂದ್ರ ಬ್ಯಾಂಕಿನ ಕರ್ತವ್ಯವಾದರೂ ಕೂಡ ರೈತರಿಂದ ಅರ್ಜಿ ಗಳನ್ನು ತೆಗೆದುಕೊಂಡಮೇಲೆ ಅವರಿಂದ ಇನ್‌ವೆಸ್ಟಿಗೇಷನ್ ಫೀಸನ್ನು ತೆಗೆದುಕೊಂಡಮೇಲೆ ಅವರಿಗೆ ಹಣವನ್ನು ಕೊಡುವ ಕರ್ತವ್ಯವನ್ನು ಈಡೇರಿಸಿಕೊಡಬೇಕು. ಆದು ಕೇಂದ್ರ ಮತ್ತು ಪ್ರೈಮರಿ ಬ್ಯಾಂಕಿನ ಕರ್ತವ್ಯವಲ್ಲವೇ? ಒಂದು ವೇಳೆ ಅವರು ಕರ್ತವ್ಯ ಲೋಪ ಮಾಡಿದ್ದರೆ ಸರ್ಕಾರದವರು ಕೇಂದ್ರ ಬ್ಯಾಂಕಿಗೆ ಏನು ಸೂಚನೆಯನ್ನು ಕೊಡುತ್ತಾರೆ?

ಶ್ರೀ ಕೆ. ಪುಟ್ಟಸ್ವಾಮಿ.—ಇದರಲ್ಲೇನೂ ಕರ್ತವ್ಯ ಲೋಪವಾಗಿಲ್ಲ. ಅನೇಕ ವೇಳೆ ಪ್ರೈಮರಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಸೆಂಟ್ರಲ್ ಡೆವಲಪ್‌ಮೆಂಟ್ ಬ್ಯಾಂಕಿನವರು ಸಾಲ ಕೊಡು ವುದೂ ಉಂಟು. ಆ ಕಾಲದಲ್ಲಿ ಯಾವ ನೀತಿಯನ್ನು ಹಾಕಿರುತ್ತಾರೋ ಅದನ್ನು ಅವರು ತಿಳಿಸು ತ್ತಾರೆ. ಪ್ರೈಮರಿ ಡೆವಲಪ್‌ಮೆಂಟ್ ಬ್ಯಾಂಕಿನವರು ಸೆಂಟ್ರಲ್ ಡೆವಲಪ್‌ಮೆಂಟ್ ಬ್ಯಾಂಕಿನವರು ಹಾಕಿರತಕ್ಕ ನೀತಿಗೆ ಅನುಗುಣವಾಗಿ ನಡೆಯಬೇಕೆಂದು ಈಗ ತಿಳಿಸಿದ್ದಾರೆ.

Debt redemption and land improvement was in the ratio of 60:40 in 1963-64. In 1964-65, it was 50:50 and in 1965-66, it was 20:80—20 per cent for debt redumption and 80 per cent for land improvement. But, unfortunately certain Primary Land Development Banks do not observe the policy laid down by the Central Land Development Bank, as a result of which there is known to be delay and disappointment.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸಚಿವರು ಉತ್ತರ ಕೊಡುವ ಕಾಲದಲ್ಲಿ ಪೆಂಡಿಂಗ್ ಇರುವ ದರಖಾಸ್ತುಗಳನ್ನು ಯೋಗ್ಯತೆಯ ಒಂದು ಆಧಾರದ ಮೇಲೆ ವಿಲೇವಾರಿ ಮಾಡುತ್ತಾರೆಂದು ಹೇಳಿದರು. ಆ ರೀತಿಯಾಗಿ ಯೋಗ್ಯತೆಯ ಆಧಾರದ ಮೇಲೆ ಅವನ್ನು ವಿಲೇವಾರಿ ಮಾಡುವುದಕ್ಕೆ ಸರ್ಕಾರ ಏನು ಸೂತ್ರವನ್ನು ಕಂಡುಹಿಡಿದಿದ್ದಾರೆ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರಿಗೆ ಆ ವಿಚಾರ ತಿಳಿದಿದೆಯೆಂದು ನಾನು ತಿಳಿದು ಕೊಂಡಿದ್ದೆ. ಈಗತಾನೇ ಈ ಸಭೆಗೆ ಏನಂತಿ ಮಾಡಿಕೊಂಡಿದ್ದೇನೆ. As already stated by me, the Primary Land Development Banks will have to observe the policy laid down by the Central Land Development Bank, *i.e.*, the debt redemption loan will be only 20 per cent whereas the land improvement loan will be 80 per cent. That policy has to be observed first. In addition to this, the valuation and other things should have been observed. All these things will be taken into consideration and the loan will be sanctioned on the merit of each application. By merit, I mean whether

there is the borrowing capacity and whether he has got the capacity to repay. All these things will have to be taken into consideration.

Board of Directors to the Land Development Bank, Channarayapatna

*Q.—566. Sri S. SIVAPPA (Shravanabelagola).—

Will the Minister for Co-operation and Housing be pleased state :—

(*a*) whether the new Board of Directors were elected to the Land Development Bank, Channarayaptna, during the month of December 1965;

(*b*) whether it is a fact that the old Board of Directors are functioning up till now;

(*c*) the No. of Board meetings held after the election ?

A.—Sri K. PUTTASWAMY (Minister for Co-operation and Housing).—

(*a*) Yes.

(*b*) They functioned up to 25th March 1966.

(*c*) 3—*viz.*, two by the Old Board and one by the New Board.

ಶ್ರೀ ಎಸ್. ಶಿವಪ್ಪ.—ಚನ್ನರಾಯಪಟ್ಟಣದ ಭೂ ಅಭಿವೃದ್ಧಿ ಬ್ಯಾಂಕಿನ ಡೈರಕ್ಟರುಗಳ ಮುಂಡಲೆ ಚುನಾವಣೆ ಹೋದ ಡಿಸೆಂಬರ್‌ನಲ್ಲಿ ನಡೆದಾಗ್ಯೂ ಈ ವರ್ಷ ಮಾರ್ಚ್ 25ನೇ ತಾರೀಖಿನ ವರೆಗೆ ಹಳೆಯ ಬೋರ್ಡಸ್ ಡೈರೆಕ್ಟರುಗಳೇ ಮುಂದುವರೆಯುತ್ತಿರುವುದರ ಔಚಿತ್ಯವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಔಚಿತ್ಯವಿಷ್ಟೇ : ರೂಲ್ 13ರ ಪ್ರಕಾರ ಅದರಲ್ಲಿ ಪ್ರಾವಿಷೋ ಏನಿದೆ ಯೆಂದು ಹೇಳಿದರೆ, As per rules, the Old Committee shall continue in office till the new Committee is elected and shall thereafter hand over charge of the office to such new Committee. The new Committee did not ask the old Committee for handing over charge and therefore it was not handed over.

ಶ್ರೀ ಎಸ್. ಶಿವಪ್ಪ.—ಡಿಸೆಂಬರ್‌ನಲ್ಲಿ ಹೊಸ ಕಮಿಟಿಯ ಚುನಾವಣೆಯಾದ ಮೇಲೆ ಅವರು ನಮಗೆ ಚಾರ್ಜ್ ಬೇಡವೆಂದು ಏನಾದರೂ ಬರೆದುಕೊಟ್ಟಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಚಾರ್ಜ್ ಬೇಡವೆಂದು ಬರೆದುಕೊಟ್ಟಿಲ್ಲ. ಅವರು ಚಾರ್ಜ್ ಕೇಳಿಲಲ್ಲ. ಇವರು ಕೊಡಲಿಲ್ಲ. ಹಳೆಯ ಕಮಿಟಿಯಲ್ಲಿ ಹೊಸದಾಗಿ ಚುನಾವಣೆಯಾಗಿರುವವರ ಪೈಕಿ 9 ಜನರಲ್ಲಿ 6 ಜನರು ಚುನಾಯಿತರಾಗಿದ್ದಾರೆ. 6 ಜನ ಹಳಬರೇ ಚುನಾಯಿತರಾಗಿದ್ದಾರೆ. ಆ ಕಮಿಟಿ ಇನ್ನೆರಡು ಮೂರು ತಿಂಗಳುಗಳ ಕಾಲ ಕೆಲಸಮಾಡಬೇಕಾಗಿತ್ತು. ಹೊಸ ಕಮಿಟಿಯವರೂ ಸಹ ಚಾರ್ಜು ತೆಗೆದುಕೊಳ್ಳುವುದಕ್ಕೆ ಆತುರವಾಗಿರಲಲ್ಲ. ಅದಕ್ಕೊಸ್ಕರ ಆ ಕಮಿಟಿಯೇ ಕಂಟಿನ್ಯೂ ಆಗಿದೆ.

ಶ್ರೀ ಎಸ್. ಶಿವಪ್ಪ.—ಚನ್ನರಾಯಪಟ್ಟಣದ ಈ ಬ್ಯಾಂಕಿನ ಅಧ್ಯಕ್ಷರ ಚುನಾವಣೆಯಲ್ಲಿ ಏನೋ ಕುಂಬಕೋಣ ಮಾಡಿ ಹೊಸ ಅಧ್ಯಕ್ಷರ ಚುನಾವಣೆಯಾದರೂ ಅವರಿಗೆ ಅಧಿಕಾರ ಕೊಡದೆ ಜನವರಿ ತಿಂಗಳಿಂದ ಮಾರ್ಚ್ ತಿಂಗಳಿನವರೆಗೆ ಇರ್ರಿಗ್ಯೂಷನ್ ಬಾವಿಗಳ ರಿಕಾರ್ಡನ್ನು ಹಂಚುವ ಕಾಲವಾದ್ದರಿಂದ ಇವರೇ ಕುಟಿಲೋಪಾಯಗಳಿಂದ ಅಧಿಕಾರ ಮಾಡಿಕೊಂಡು ಅಡಳಿತವನ್ನು ನಡೆಸುತ್ತಿರುವುದನ್ನು ಸರ್ಕಾರದವರು ವಿಚಾರ ಮಾಡುತ್ತಾರೆಯೇ ?